ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ 706/2017**

ಸಿ.ಡಬ್ಲ್ಯೂ -7 ಪಿ.ಡಬ್ಲ್ಯೂ -5

ದಿಃ 29.07.2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಡಾ. ಗುರುಮಲ್ಲಪ್ಪ |
| ಗಂಡನ ಹೆಸರು | ವಿ ತಿಮ್ಮಯ್ಯ |
| ವಯಸ್ಸು | ಸುಮಾರು 53 ವರ್ಷ |
| ಕೆಲಸ | ಸ್ರಿರೋಗ ತಜ್ಞರು ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹುಣಸೂರು |
| ವಾಸಸ್ಥಳ | ಹುಣಸೂರು |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಮೇ 2017 ರಿಂದ ಇಲ್ಲಿಯವರೆಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 11.08.2017 ರಂದು ಮಧ್ಯಾಹ್ನ 1.00 ಗಂಟೆಗೆ ಚಾಸಾ-2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ಸದರಿಯವರನ್ನು ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. **Abrasions over the middle left arm 4 x 1 cm**
2. **Complaint pain in left elbow joint, tenderness plus**
3. **Complaint pain in left side of anterior chest tenderness plus**
4. **contusion over right deltoid region (it is said to be human bite)**

ರೋಗಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮೂಳೆ ತಜ್ಞ್ ರ ಬಳಿ ಕಳುಹಿಸಲಾಗಿದ್ದು, ಸದರಿ ರೋಗಿಗೆ ಕ್ಷಕಿರಣವನ್ನು ತೆಗೆಸಲು ಸೂಚಿಸಲಾಗಿತ್ತು, ಆದರೆ ರೋಗಿ ಮಾಡಿಸಿಕೊಂಡಿರುವುದಿಲ್ಲ. ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸಾಕ್ಷಿಗೆ ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸದರಿ ದಿನದಂದೇ ಮಧ್ಯಾಹ್ನ 1.05 ಗಂಟೆಗೆ ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ಸದರಿಯವರನ್ನು ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. **Abrasions over the left arm** 2 **x** 1 **cm**
2. **contusion over left arm** 4 **x** 2 **cm**
3. **Contusion over left calf**, **tenderness plus** 4 **x** 4 **cm**

ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸಾಕ್ಷಿಗೆ ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯೇದ ಮುಂದಿರುವ ಮು ಮಾ 1 ರಿಂದ 3 ಹಲ್ಲೆ ಮಾಡಿದಾಗ ನಿಪಿ.6 ಮತ್ತು 7 ರಲ್ಲಿ ಹೇಳಿರುವ ಗಾಯಗಳು ಆಗುವ ಸಂಭವ ಇದೆ. ಒಬ್ಬ ವ್ಯಕ್ತಿ ಕೈಯನ್ನು ಕಚ್ಚಿದಾಗ ನಿಪಿ.6 ರಲ್ಲಿ ಹೇಳಿದ ಗಾಯ ಆಗುತ್ತದೆ.

**ಪಾಟೀಸವಾಲುಃ ಆರೋಪಿತರ ಪರ ಕು. ವಿ ಕೆ ವಕೀಲರಿಂದಃ**

ಚಾಸಾ.1 ಮತ್ತು 2 ರವರು ಯಾರ ಜೊತೆಗೆ ಆಸ್ಪತ್ರೆಗೆ ಬಂದಿದ್ದರು ಎಂದರೆ ಸಾಕ್ಷಿ ಚಾಸಾ.1 ಮಡಿತ್ತು 2 ರವರು ಒಬ್ಬರ ಜೊತೆ ಒಬ್ಬರು ಬಂದಿದ್ದರು ಎನ್ನುತ್ತಾರೆ. ಆರೋಪಿತರ ಊರಿನಿಂದ ಹುಣಸೂರಿಗೆ ಬರಬೇಕಾದರೆ ಹನಗೋಡು ಊರಿನ ಮುಖೇನ ಬರಬೇಕು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಹನಗೋಡಿನಲ್ಲಿ ಸರ್ಕಾರದ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ ಎಂದರೆ 24 **X** 7 ಇದೆ ಎಂದರೆ ಸರಿ. ಪ್ರಾಥಮಿಕ ಆರೋಗ್ಯ ಕೇಂದ್ದಲ್ಲಿ ನಿಪಿ.6 ಮತ್ತು 7 ರಲ್ಲಿ ಹೇಳಲಾದ ಗಾಯಗಳಿಗೆ ಚಿಕಿತ್ಸೆ ಕೊಡುವ ಸೌಲಭ್ಯ ಹಾಗೂ ವೈದರು ಇದ್ದಾರೆ ಎಂದರೆ ಸರಿ. ನಿಪಿ.6 ಮತ್ತು 7 ರಲ್ಲಿ ನಮೂದು ಇರುವ ಗಾಯಗಳು ದ್ವಿಚಕ್ರ ವಾಹನ ಅಥವಾ ಎತ್ತಿನ ಗಾಡಿಯಲ್ಲಿ ಹೋಗಬೇಕಾದರೆ ಬಿದ್ದರೆ ಆಗುವ ಸಂಭವ ಇದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು